(SRI A. BHEEMAPPA NAIK.)

decision to shift the Institute was taken because of the non-co-operative attitude of the Government of Mysore ?

A.—Dr. R. NAGAN GOWDA (Minister for Agriculture).—

(*a*) Such a shifting is contemplated by Government of India.

(*b*) The Agaram Farm which is now in the possession of the Institute and which belongs to Defence Department is now being taken back by that Department. Further, Government of India contemplate expanding the activities of the Institution. Difficulties in securing land required for the Institute appears to be the cause for this move.

(*c*) The Government of Mysore desire the retention of the Institution at Bangalore.

(*d*) The Government of Mysore suggested the acquisition of land in certain villages of the Bangalore Sub-Division for use of the Institution at a cost of Rs. 7,33,000 and also suggested that the land near the Institution under the control of Defence Department might be secured from them for the Dairy Research Institute. For their immediate use the leasing of about 163 acres of land near the Institute under the control of the Corporation on an annual lease amount of Rs. 26,060 was proposed by this Government.

The Government of India desire the grant of 200 acres of land belonging to the Corporation and the Horticultural Department free of cost for their immediate use.

(*e*) No.

Q.—352. Sri G. A. THIMMAPPA GOWDA (Arkalgud).—

Will the Government be pleased to state :—

(*a*) whether the Central Government have proposed to shift the Imperial Dairy Institute Farm from Bangalore ;

(*b*) if so, the reasons for the same?

A.—Dr. R. NAGAN GOWDA (Minister for Agriculture).—

(*a*) Such a shifting is contemplated by the Government of India.

(*b*) The Agaram Farm which is now in the possession of the Institute and which belongs to Defence Department is now being taken back by that Department. Further, Government of India contemplate expanding the activities of the Institution. Difficulties in securing land required for the Institute appears to be the cause for this move.

12-30 P.M.

ಶ್ರೀ ಕೊಟ್ರಬಸವನಗೌಡ.—Dairy Instituteಗೆ ನೀಡಿನ ಸೌಕರ್ಯ ಒದಗಿಸುವುದು ಸರ್ಕಾರದವರಿಗೆ ಸಾಧ್ಯವಾಗಿಲ್ಲವೇ ?

ಡಾ॥ ಆರ್. ನಾಗನಗೌಡ.—ನಾವು Dairy Instituteಗೆ ಬೇಕಾದಷ್ಟು ಜಮೀನು ಒದಗಿಸಿ ಕೊಟ್ಟಿದ್ದೇವೆ. ಏನೇನು ಅನುಕೂಲಗಳು ಬೇಕೋ ಆ ಅನುಕೂಲಗಳನ್ನು ಮಾಡಿಕೊಟ್ಟಿದ್ದೇವೆ. We have shown them the method of acquiring the lands that are required and also other conveniences that are required for this purpose.

Mr. SPEAKER.—Sri Kotra Basavana Goud, the reason is given in the answers to the questions. They wanted the land free of cost and the Government cannot give it free of cost.

ಶ್ರೀ ಕೊಟ್ರಬಸವನಗೌಡ.—ಸರ್ಕಾರದವರು ಈ ವಿಷಯದಲ್ಲಿ ಸಾಕಷ್ಟು ಪ್ರಯತ್ನ ಮಾಡಲಿಲ್ಲವೆಂದು ಒಪ್ಪಿಕೊಳ್ಳುತ್ತಾರೆಯೇ ?

ಡಾ॥ ಆರ್. ನಾಗನಗೌಡ.—ನಾವು ಅಸಾಧಾರಣವಾದ ಪ್ರಯತ್ನ ಮಾಡಿದ್ದೇವೆ.

Sri A. BHEEMAPPA NAIK.—What are the activities that are carried on in this Institute ?

Dr. R. NAGAN GOWDA.—I do not know whether the Hon'ble Member wants to know the present activities or the activities that are supposed to be carried on in that Institute ?

Sri A. BHEEMAPPA NAIK.—The activities that were being carried on during all these years. Those are athe ctivities that I want to know.

Dr. R. NAGAN GOWDA.—I would like to have notice for that. Though I have visited this institute more than once, they did not give any details because they were doing some very complicated research work. I would like to have notice about that.

Sri A. BHEEMAPPA NAIK.—Is it because of the want of knowledge about the importance and usefulness of this institution to Mysore State that you

have been careless in giving the concession they want or in giving the facilities that they want?

Sri Kadidal MANJAPPA.—As regards land, we had acquired certain land, but in spite of it they chose to shift it.

Mr. SPEAKER.—The point is, according to the answer furnished . . .

Dr. R. NAGAN GOWDA.—The Hon'ble Member is not correct in saying that the Government are ignorant of the work that is going on there and then he is also wrong in saying that we did not make enough efforts in procuring conveniences for such an institute to stay here. I think, we went out of the way to make it convenient for them to acquire the lands that they required and stay here. Barring that we could not have done anything.

Sri A. BHEEMAPPA NAIK.—I was just asking you, supposing you had started such an institution by yourself and you had known it usefulness, I do not think you would have grudged giving land free of cost. That is why I am just pressing on you the need for giving them the land free of cost. If you had known the importance of this institute, you would not have done like this. I never used the word 'ignorant'. I had very carefully worded my question. But you are coming forward to say 'ignorant'. You were ignorant.

Mr. SPEAKER.—This is not the time for discussion.

Sri A. BHEEMAPPA NAIK.—Now I am putting a question to you. What prevented you from giving free grant of land to that institution if that was all the facility that they wanted?

Sri Kadidal MANJAPPA.—There is no Government land available near Bangalore where they wanted the land.

Sri A. BHEEMAPPA NAIK.—What prevented you from acquiring at our cost—at the cost of the Government of Mysore, and giving them free?

Sri Kadidal MANJAPPA.—It is not the policy to acquire land for an institution belonging to the Central Government.

Sri A. BHEEMAPPA NAIK.—Are you trying to differentiate between an institution started by the Central Government and that of Mysore Government?

Sri Kadidal MANJAPPA.—That does not arise, Sir.

Sri A. BHEEMAPPA NAIK.—Even now, is it not necessary, in order to retain this institution in Mysore, to give free grant of land even acquiring at a cost of few lakhs and retain that institute?

Sri Kadidal MANJAPPA.—It is a question of policy, Sir. We do not agree to acquire at our cost.

Sri A. BHEEMAPPA NAIK.—Will the Government kindly inspect, by a personal visit, the kind of activities that are going there which are useful for the improvement of the cattle-wealth of Mysore and to the health of Bangalore City especially in the form of getting milk supply; will it not be necessary to acquire the land at the cost of Government and give them all facilities and induce them once again to retain that great institution in Mysore alone?

Sri Kadidal MANJAPPA.—It is not as though the Central Government has not got necessary funds; the Central Government can meet the cost of acquisition. We are prepared to acquire the land at their cost.

Sri A. BHEEMAPPA NAIK.—In that case, will the Government please request or press on the Central Government once again to meet the cost in proportion or at certain proportions?

Dr. R. NAGAN GOWDA.—The authorities connected with this institution suggested alternative sites for this institution. I went and inspected the area that they wanted and then it was for us to induce even the cultivators owning these lands to agree to have these lands acquired for the purpose of the Dairy Institute. That was so far as the dry lands were concerned. So far as the wet lands were concerned, we suggested that they could acquire the wet lands in Koramangala tank which are now in the hands of the Corporation; the Corporation have leased out that land for about Rs. 25,000 per year. We suggested to the Government of India that they can acquire that also. The Government of India propose to spend

(DR. R. NAGAN GOWDA.)
about Rs. 2 crores on this enlarged Dairy Institute here. The cost of acquiring all these lands would be in the neighbourhood of Rs. 7 to 7½ lakhs only. It is possible for them to acquire these lands.

Sri A. BHEEMAPPA NAIK.—I had just asked whether you were prepared to induce once again the Government of India and bring pressure on them to retain that Institute?

Dr. R. NAGAN GOWDA.—I have spoken to the Agriculture Minister in Delhi about this institute, personally.

Mr. SPEAKER.—The point is, whether the Government will make another attempt to retain that institute.

Sri H. SIDDAVEERAPPA.—Every time we go to Delhi, we make an earnest effort about its retention. Every Minister has done it.

Sri A. BHEEMAPPA NAIK.—What are the present activities that will be carried out hereafter; or will it shift entirely with lock, stock and barrel?

Dr. R. NAGAN GOWDA.—The maintenance of bulls of foreign breeds and obtaining of semen for artificial insemination and its distribution from here to all the centres in India. And the work that is now going on here, I believe, will remain here. The work they were contemplating was to have a Dairy Bacteriology and Chemistry Section, work of Animal Nutrition and other branches of work of fundamental nature. Now they want to have it shifted to Karnal where they have 2,000 acres of land.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ Institute ಬಳಿಯುರತಕ್ಕ ಜಮೀನು ಬಹಳ ಚೆನ್ನಾಯಾದದ್ದು ಎಂದು ತಿಳಿದುಕೊಂಡರೆ ಇಂಡಿಯಾ ಸರ್ಕಾರದವರಿಗೆ ಹೆಸರ ಘಟ್ಟದ ಬಳಿ ಕೊಡುವುದಕ್ಕೆ ಏನಾದರೂವಾದ ಜಮೀನು ಬೇಕಾದಷ್ಟು ಇಲ್ಲವೇ?

Dr. R. NAGAN GOWDA.—We made a suggestion if they would consider Hessarghatta farm, but they were of the feeling that it was too far off from the present institute.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅಂದರೆ, ಬೆಂಗಳೂರಿನ ಆ ಜಾಗ ಮತ್ತು ಬೆಂಗಳೂರಿನ ನುತ್ತಮುತ್ತಲ ಜಾಗ ಬಿಟ್ಟು ಬೇರೆ ಯಾವ ಜಾಗವನ್ನೂ ಒಪ್ಪುವುದಿಲ್ಲವೇ?

ಡಾ॥ ಆರ್. ನಾಗನಗೌಡ.—ಹೆಸರಘಟ್ಟವನ್ನು ತೋರಿಸಿದೆವು. ಆದರೆ ಅವರು ಇಲ್ಲೇ ಹೊನೂರು ರೋಡ್ ಇರುವ ಕಡೆಯಲ್ಲೇ ಬೇಕೆಂದು ಹೇಳಿದರು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅವರು ಒಟ್ಟು ಎಷ್ಟು ಎಕರೆ ಜಮೀನು ಬೇಕೆಂದ ಹೇಳಿದ್ದಾರೆ?

ಡಾ॥ ಆರ್. ನಾಗನಗೌಡ.—600 ಎಕರೆ ಖುಷ್ಕಿ ಮತ್ತು 200 ಎಕರೆ ತರೀ ಇದ್ದರೆ ಅನುಕೂಲವೆಂದು ತಿಳಿಸಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅವರು 200 ಎಕರೆ ಗದ್ದೆ ಮಾತ್ರ ಬೇಕೆಂದು ಕೇಳಿಲ್ಲವೇ?

ಡಾ॥ ಆರ್. ನಾಗನಗೌಡ.—ಇಲ್ಲ; ಅವರು ಇದಷ್ಟೂ ಬೇಕೆಂದು ಕೇಳಿದ್ದಾರೆ.

ಶ್ರೀ ಎ. ವಿ ನರಸಿಂಹರೆಡ್ಡಿ.—ಈಗ ಈ ಕಾರ್ಪೊರೇಷನ್ನಿನವರ ನುಪರ್ದಿನಲ್ಲಿರತಕ್ಕ 200 ಎಕರೆ ಜಮೀನನ್ನು ಇಂಡಿಯಾ ಸರ್ಕಾರದವರು ಬಿಡಿಸಿಕೊಡ ಬೇಕೆಂದು ಕೇಳಿದ್ದಾರಲ್ಲ ಇದು ಮೊದಲಿಗೆ ಸರ್ಕಾರದ ವರ ಜಮೀನಾಗಿತ್ತಲ್ಲವೇ?

ಡಾ॥ ಆರ್. ನಾಗನಗೌಡ.—ಹೌದು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹಾಗಿರುವಾಗ ತಾವು ಈ 200 ಎಕರೆ ಜಮೀನನ್ನು ಆ ಕೇಂದ್ರ ಸರ್ಕಾರದವರಿಗೆ ಉಚಿತವಾಗಿ ಬಿಟ್ಟುಕೊಡಬೇಕೆಂದು ಕಾರ್ಪೊರೇಷನ್ನಿನವರಿಗೆ ಒತ್ತಾಯಮಾಡುವುದಕ್ಕೆ ಆಗ ಲಿಲ್ಲವೇ?

ಶ್ರೀ ಕೆ. ಹನುಮಂತಯ್ಯ.—ಆ ಜಮೀನು ಈಗ ಕಾರ್ಪೊರೇಷನ್ನಿನವರ ಆಡಳಿತದಲ್ಲಿದೆ. ಅದು ಕಾರ್ಪೊರೇಷನ್ ಲ್ಯಾಂಡ್ ಆಯಿತು. ಅದನ್ನೀಗ ಉಚಿತವಾಗಿ ಕೇಂದ್ರ ಸರ್ಕಾರಕ್ಕೆ ಬಿಟ್ಟುಕೊಡಿ ಎಂಬುದಾಗಿ ಅವರನ್ನು ಒತ್ತಾಯ ಮಾಡುವುದಕ್ಕಾಗುವುದಿಲ್ಲ ಈಗ ಆ ಜಮೀನನ್ನು ಉಚಿತವಾಗಿ ಬಿಟ್ಟುಕೊಡ ಬೇಕೆಂದು ಕೇಳತಕ್ಕ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಈ ವಿವನ ಇಂಡಿಯಾ ಸರ್ಕಾರದವರು ಖರ್ಚು ಮಾಡ ತಕ್ಕ ದುಡ್ಡೂ, ಮೈಸೂರು ಸರ್ಕಾರ ಖರ್ಚುಮಾಡ ತಕ್ಕ ದುಡ್ಡೂ ಮತ್ತು ಕಾರ್ಪೊರೇಷನ್ನಿನವರು ಖರ್ಚು ಮಾಡುತ್ತಿರುವ ಹಣವೂ ಸಾರ್ವಜನಿಕರದೇ ಆಗಿದೆ. ಆದರೆ ಒಂದು ಸ್ವತ್ತನ್ನು ಒಬ್ಬರಿಂದ ತೆಗೆದುಕೊಳ್ಳಬೇಕಾದರೆ ಅದನ್ನು ಯಾವ ರೀತಿ ತೆಗೆದುಕೊಳ್ಳಬೇಕೆಂಬುದಕ್ಕೆ ರಾಜ್ಯಾಂಗದಲ್ಲಿ ವಿಧಾಯಕ ಮಾಡಿದೆ. ಅವಕ್ಕನುಗುಣವಾಗಿ ನಾವೀ ದಿವನ ಪರಿಹಾರ ಕೊಡದೆ ಯಾವ ಸ್ವತ್ತನ್ನಾಗಲಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆದುದರಿಂದ ಉಚಿತವಾಗಿ ಕೇಳತಕ್ಕಂಥ ಪ್ರಶ್ನೆ ಈಗ ಉದ್ಭವಿಸುವುದಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಇಂಥ ಒಂದು ದೊಡ್ಡ ಡೈರಿ ಇನ್‌ಸ್ಟಿಟ್ಯೂಟ್ ಈ ಬೆಂಗಳೂರು ಒಂದು ಕಡೆಯಲ್ಲದೆ ಇಡೀ ಭಾರತದಲ್ಲೇ ಮತ್ತೆಲ್ಲಿಯೂ ಇಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಹನುಮಂತಯ್ಯ.—ಇಂತಹದೇ ಮತ್ತೊಂದು ಸಂಸ್ಥೆ ಪೂಸಾದಲ್ಲಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈಗ ಈ ಬೆಂಗಳೂರಿನಲ್ಲಿರತಕ್ಕಂಥ ಡೈರಿ ರಿಸರ್ಚ್ ಇನ್‌ಸ್ಟಿಟ್ಯೂಟುಗಳೂ, ಸ್ಟಡ್ ಫಾರಂಗಳೂ, ಮತ್ತು ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಸೆಂಟರುಗಳೂ ಇಡೀ ಭಾರತದಲ್ಲೇ ಇನ್ನೆಲ್ಲಿಯೂ ಇರುವುದಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿಲ್ಲವೇ?

Sri K. HANUMANTHAIYA.—That is not correct.

ಶ್ರೀ ಎ. ವಿ. ನರಸಿಂಹರೆಡ್ಡಿ.—ಕೆಲವು ಖುಷ್ಕಿ ಜಮೀನುಗಳ ಮಾಲೀಕರು ಅವರ ಜಮೀನುಗಳನ್ನೆಲ್ಲಾ ಈ ಡೈರಿಫಾರಂ ಅನ್ನು ಇಲ್ಲೇ ಉಳಿಸಿಕೊಳ್ಳುವುದಾದರೆ ಉಚಿತವಾಗಿ ಬಿಟ್ಟುಕೊಡುತ್ತೇವೆಂದು ಹೇಳಿರತಕ್ಕದ್ದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಕೆ. ಹನುಮಂತಯ್ಯ.—ಹಾಗೆ ಅವರ ಉಚಿತವಾಗಿ ಜಮೀನನ್ನು ಬಿಟ್ಟು ಕೊಡುತ್ತೇವೆಂದು ಹೇಳಿರ ತಕ್ಕ ವಿಚಾರವನ್ನು ನಾನು ಕೇಳಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹಾಗೆ ಉಚಿತವಾಗಿ ಅಂದರೆ ಮಾರ್ಕೆಟ್ ಬೆಲೆಗಿಂತ ಕಮ್ಮಿ ಬೆಲೆಗೆ ಅವರು ಕೊಡುತ್ತೇವೆಂದು ಹೇಳಿರುವುದು ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಕೆ. ಹನುಮಂತಯ್ಯ.—ಹಾಗೆ ಅವರು ಆ ಜಮೀನುಗಳನ್ನು ಮಾರ್ಕೆಟ್ ರೇಟಿಗಿಂತಲೂ ಕಡಮೆ ರೇಟಿಗೆ ಕೊಡುತ್ತೇವೆಂದು ಹೇಳಿರುವುದೂ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹಾಗೆ ಮಾರ್ಕೆಟ್ ಬೆಲೆಗಿಂತ ಕಮ್ಮಿ ರೇಟಿಗೆ ಕೊಡುವುದಾಗಿದ್ದರೆ ಸರ್ಕಾರದವರು ಅವುಗಳನ್ನು ಕೊಂಡುಕೊಳ್ಳುವುದಾಗಿ ಮಾನ್ಯ ವ್ಯವಸಾಯ ನಚಿವರು ಆ ಜನರಿಗೆ ಹೇಳಿಕೆ ಇತ್ತಿರುವುದೂ ಕೂಡ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಈಗ ಅವರು ಎಕರೆ ಒಂದಕ್ಕೆ ಎಷ್ಟು ಬೆಲೆಯನ್ನು ಕೇಳುತ್ತಾರೋ ಅದು ಹೆಚ್ಚಾಯಿತೇ ಅಥವಾ ಕಡಮೆಯಾಯಿತೇ ಎನ್ನುವುದನ್ನು ಮಾರ್ಕೆಟ್ ರೇಟಿಗೆ ಹೋಲಿಕೆ ಹಾಕಿ ನಿರ್ಧರ ಮಾಡಬೇಕಾಗಿದೆ. ಆದರೆ ಈ ಪ್ರಶ್ನೆ ಸುಮ್ಮನೆ ಬಾಯಲ್ಲಿ ಮಾತನಾಡಿದರೆ ತೀರ್ಮಾನವಾಗುವುದಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈಗ ತಾವು ಈ ಬುಷ್ಕಿ ಜಮೀನುಗಳಿಗೆ ಬೆಂಗಳೂರಿನ ಸುತ್ತಮುತ್ತ ಎಕರೆಗೆ 1,000 ರೂಪಾಯಿಗಳಿಂದ 3,000 ರೂಪಾಯಿಗಳವರೆಗೂ ಬೆಲೆಯನ್ನು ಹಾಕಿದ್ದೀರಿ. ಹೀಗಿರುವಾಗ ಅವರು 800 ರೂಪಾಯಿಗಳಿಗೆ ಒಂದು ಎಕರೆಯಂತೆ ಕೊಟ್ಟರೆ ತಾವೇಕೆ ತೆಗೆದುಕೊಳ್ಳಬಾರದು ?

ಶ್ರೀ ಕೆ. ಹನುಮಂತಯ್ಯ.—ರೈತ ಕೇಳತಕ್ಕದ್ದೂ ಕೊನೆಯ ರೇಟಲ್ಲ; ಸರ್ಕಾರ ನಿಗದಿಮಾಡತಕ್ಕದ್ದೂ ಸಹ ಕೊನೆಯ ರೇಟಲ್ಲ. ಈ ಮಾರ್ಕೆಟ್ ರೇಟ್ ಏನಿದೆಯೋ ಅದೂ ಕೂಡ ಕೊನೆಯ ರೇಟಲ್ಲ. ಯಾವುದು ಕೊನೆಯ ರೇಟ್, ಯಾವುದು ಅಲ್ಲ ಎನ್ನುವುದು ಕೋರ್ಟಿನ ಮೂಲಕ ತೀರ್ಮಾನವಾಗಬೇಕಾದಂಥ ವಿಚಾರವಾಗಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹೋಗಲಿ, ಈಗ ತಾವೇನು ಒಂದು ಎಕರೆ ಜಮೀನಿಗೆ ಇಷ್ಟು ಬೆಲೆ ಕೊಡಬೇಕಾಗುತ್ತದೆಂದು ನಿಷ್ಕರ್ಷೆ ಮಾಡಿದ್ದೀರೋ ಅಷ್ಟೂ ಕೂಡ ತಮಗೆ ಹಣ ಖರ್ಚಾಗತಕ್ಕಂಥ ಸಂಭವವಿಲ್ಲ ಎಂದು ಹೇಳಿದರೆ ತಾವು ಅದನ್ನು ಒಪ್ಪುತ್ತೀರಾ ?

ಶ್ರೀ ಕೆ. ಹನುಮಂತಯ್ಯ.—ಬರಿ ಮಾತುಗಳಿಂದಲೇ ಇದು ಇತ್ಯರ್ಥವಾಗುವುದಿಲ್ಲ. Market rate has to be determined with reference to the prevailing prices in the locality.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹೋಗಲಿ—ತಾವು ಏನಾದರೂ ಒಂದು ರೀತಿಯಲ್ಲಿ ದೊಡ್ಡ ಮನಸ್ಸು ಮಾಡಿ ಇದನ್ನು ಇಲ್ಲೇ ಉಳಿಸಿಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಹನುಮಂತಯ್ಯ.—ಅದನ್ನು ಇಲ್ಲೇ ಉಳಿಸಿಕೊಳ್ಳಬೇಕೆನ್ನುವುದೇ ಸರ್ಕಾರದವರ ಉದ್ದೇಶ. ಅದಕ್ಕಾಗಿ ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈಗ ಡೈರಿ ಇಕ್ವಿಟ್ಯೂಟನ್ನು ಬೇರೆ ಕಡೆಗೆ ವರ್ಗಾಯಿಸಬೇಕೆಂಬ ವಿಚಾರದಲ್ಲಿ ಇಂಡಿಯಾ ಸರ್ಕಾರದವರ ಕೊನೆಯ ತೀರ್ಮಾನವೆಲ್ಲಿಗೆ ಬಂದಿದೆ ?

ಶ್ರೀ ಕೆ. ಹನುಮಂತಯ್ಯ.—ಈ ವಿಚಾರದಲ್ಲಿ ಅವರ ಕೊನೆಯ ತೀರ್ಮಾನವೇನಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. But it is in the safe hands of a representative of Mysore.

ಶ್ರೀ ಎ. ವಿ. ನರಸಿಂಹರೆಡ್ಡಿ.—ದಯವಿಟ್ಟು ಇದನ್ನು ಏನಾದರೂ ಮಾಡಿ ಇಲ್ಲಿ ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಹನುಮಂತಯ್ಯ.—ನಾವೀಗ ಅದೇ ಪ್ರಯತ್ನಗಳಲ್ಲಿದ್ದೇವೆ.

ಶ್ರೀ ಎಸ್. ನಿ. ನಾಗಯ್ಯರೆಡ್ಡಿ.—ಈಗ ಇದನ್ನು ಅಖ್ಯೆರಿಗೆ ಎಲ್ಲಿಗೆ ಸಾಗಿಸಬೇಕೆಂದು ತೀರ್ಮಾನ ಮಾಡಿದ್ದಾರೆ ?

ಶ್ರೀ ಕೆ. ಹನುಮಂತಯ್ಯ.—ನಮಗೆ ಕೇಂದ್ರ ಸರ್ಕಾರದಿಂದ ಅಖ್ಯೆರು ತೀರ್ಮಾನದ ಬಗ್ಗೆ ಇನ್ನೂ ಯಾವ ಗವರ್ನಮೆಂಟ್ ಆರ್ಡರೂ ಬಂದಿಲ್ಲ.

ಶ್ರೀ ಎಸ್. ನಿ. ನಾಗಯ್ಯರೆಡ್ಡಿ.—ಈಸ್ಟ್ ಪಂಜಾಬ್ ಸರ್ಕಾರದವರು ಈ ಡೈರಿ ರಿಸರ್ಚ್ ಇಕ್ವಿಟ್ಯೂಟಿಗೆ ಬೇಕಾಗತಕ್ಕಂಥ ಜಮೀನನ್ನು ಉಚಿತವಾಗಿ ಕೊಡುವುದಲ್ಲದೆ ಇದಕ್ಕೆ ಅಗತ್ಯವಾಗಿ ಬೇಕಾಗಿರತಕ್ಕಂಥ ಇತರ ಎಲ್ಲ ಸೌಲಭ್ಯಗಳನ್ನೂ ಒದಗಿಸಿ ಕೊಡುವುದಾಗಿ ಹೇಳಿರುವುದರಿಂದ ಅಲ್ಲವೇ ಈಗ ಕೇಂದ್ರ ಸರ್ಕಾರ ಇದನ್ನು ಈಸ್ಟ್ ಪಂಜಾಬಿಗೆ ವರ್ಗಾಯಿಸಬೇಕೆಂದು ಮನಸ್ಸು ಮಾಡಿರುವುದು ?

ಶ್ರೀ ಕೆ. ಹನುಮಂತಯ್ಯ.—ಆ ಸರ್ಕಾರದವರಿಗೆ ಅಲ್ಲಿ ಅನುಕೂಲವಾಗಿ ಜಮೀನಿರಬಹುದು, ಅವರು ಆ ರೀತಿಯಲ್ಲಿ ಕೊಡಬಹುದು. ಆದರೆ ನಮಗೂ ಇಲ್ಲಿ ಅದೇ ರೀತಿಯಾಗಿ ಜಮೀನಿದ್ದಿದ್ದರೆ ನಾವೂ ಹಾಗೆಯೇ ಕೊಡಬಹುದಾಗಿತ್ತು. ಈಗ ನಾವು ಸಾಧ್ಯವಾದಷ್ಟು ಅನುಕೂಲಗಳನ್ನೆಲ್ಲಾ ಕೊಟ್ಟಿದ್ದೇವೆ.

ಶ್ರೀ ಎಸ್. ನಿ. ನಾಗಯ್ಯರೆಡ್ಡಿ.—ಇಲ್ಲಿರತಕ್ಕಂಥ ಸರ್ಕಾರಿ ಜಮೀನುಗಳನ್ನಾದರೂ ಹಾಗೆ ಉಚಿತವಾಗಿ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಲು ನಿಮಗೇನು ಬಂದಿತ್ತು ?

ಶ್ರೀ ಕೆ. ಹನುಮಂತಯ್ಯ.—ನಿಮಗೇನು ಬಂದಿತ್ತೋ ನಮಗೂ ಅದೇ ಬಂದಿತ್ತು.

ಶ್ರೀ ಎಸ್. ನಿ. ನಾಗಯ್ಯರೆಡ್ಡಿ.—ಪಾರ್ಲಿಯಮೆಂಟಿನ ಮುಂದೆ ಈ ಬಗ್ಗೆ ಒಂದು ಪ್ರಶ್ನೆ ಬಂದಿದ್ದಾಗ್ಗೆ ಇದಕ್ಕೆ ಸಂಬಂಧಪಟ್ಟ ಸಚಿವರು "ಮೈಸೂರು ಸರ್ಕಾರದವರು ನಾನ್-ಕೋ-ಆಪರೇಟ್ ಮಾಡಿದ್ದರಿಂದ ಈ ಸಂಸ್ಥೆಯನ್ನು ಹೀಗೆ ಈಸ್ಟ್ ಪಂಜಾಬಿಗೆ ವರ್ಗಾಯಿಸಬೇಕಾಗಿ ಬಂತು" ಎಂಬುದಾಗಿ ಅಲ್ಲಿ ಹೇಳಿರುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಆ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ. ಅದನ್ನು ತಾವು ತಪ್ಪಾಗಿ ತಿಳಿದುಕೊಂಡು ಹೀಗೆ ವ್ಯಥಾ ಆರೋಪಣೆ ಮಾಡುತ್ತಿದ್ದೀರಿ.

ಶ್ರೀ ಎಸ್. ನಿ. ನಾಗಯ್ಯರೆಡ್ಡಿ.—ಇದನ್ನು ನಾನು ಆರೋಪಣೆ ಮಾಡುತ್ತಿಲ್ಲ. ಪಾರ್ಲಿಯಮೆಂಟಿನಲ್ಲಿ ಈ ಬಗ್ಗೆ ಆ ಸಂಬಂಧಪಟ್ಟ ಸಚಿವರು ಏನು ಹೇಳಿದ್ದಾರೆ ಎನ್ನುವುದನ್ನು ಕಣ್ಣುಬಿಟ್ಟು ನೋಡಿದರೆ ಆಗ ಗೊತ್ತಾಗುತ್ತದೆಯಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ನಾವು ಯಾವಾಗಲೂ ಕಣ್ಣು ಬಿಟ್ಟುಕೊಂಡೇ ನೋಡುವುದು. ನೀವೇನಾದರೂ ಹಾಗೆ ನರಿಯಾಗಿ ಕಣ್ಣು ಬಿಟ್ಟು ನೋಡದೆ ಇದ್ದರೂ ಇರಬಹುದು.

ಶ್ರೀ ಎಸ್. ನಿ. ನಾಗಯ್ಯರೆಡ್ಡಿ.—ಪಾರ್ಲಿಯಮೆಂಟಿನ ಮುಂದೆ ಈ ವಿಚಾರ ಚರ್ಚೆಗೆ ಬಂದಿದ್ದಾಗ ಸಂಬಂಧಪಟ್ಟ ಮಂತ್ರಿಗಳು "ಈ ಬಗ್ಗೆ ಮೈಸೂರು ಸರ್ಕಾರದವರು ನಾನ್-ಕೋ-ಆಪರೇಟ್ ಮಾಡಿದ್ದರಿಂದ ಈ ದಿವನ ಇದನ್ನು ಬೇರೆ ಕಡೆಗೆ ವರ್ಗಾಯಿಸ

(ಶ್ರೀ ಎ. ಸಿ. ನಾಗಯ್ಯರೆಡ್ಡಿ.)

ಬೇಕಾಗಿ ಬಂತು'' ಎಂಬುದಾಗಿ ಹೇಳಿರತಕ್ಕ ವಿಚಾರ ಈಗಾಗಲೇ ಆ ಪಾರ್ಲಿಯಮೆಂಟ್ ಪ್ರೊಸೀಡಿಂಗ್ಸ್‌ನಲ್ಲಿ ಪಬ್ಲಿಷ್ ಆಗಿದೆ. ಆ ವಿಚಾರ ತಮ್ಮ ಗಮನಕ್ಕೆ ಬಂದಿಲ್ಲವೇ ಎಂದು ಕೇಳುತ್ತೇನೆ.

ಶ್ರೀ ಕೆ. ಹನುಮಂತಯ್ಯ.—ಆ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಎ. ಸಿ. ನಾಗಯ್ಯರೆಡ್ಡಿ.—ಹಾಗಾದರೆ ಆ ವಿಚಾರವನ್ನು ತಿಳಿದುಕೊಳ್ಳುವಂಥ ಅಗತ್ಯ ನಿಮಗಿಲ್ಲ ಎಂದು ಕಾಣುತ್ತಿದೆ.

ಶ್ರೀ ಕೆ. ಹನುಮಂತಯ್ಯ.—ಅದು ತಮ್ಮ ಅಭಿಪ್ರಾಯ.

ಶ್ರೀ ಜೆ. ಮಹಮ್ಮದ್ ಇಮಾಂ.—ಈ ಡೈರಿ ರಿಸರ್ಚ್ ಇನ್‌ಸ್ಟಿಟ್ಯೂಟ್ ಇಲ್ಲಿ ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದೆ?

Dr. R. NAGAN GOWDA.—It is here for over 30 years.

Sri J. MOHAMED IMAM.—During these 30 years, is it not a fact that this Institute was very useful to the State of Mysore?

Dr. R. NAGAN GOWDA.—Of course, it has been maintaining some pure breeds of cattle here and those stud bulls have been useful.

Sri J. MOHAMED IMAM.—Was the question of grant of land the only issue or were there other reasons for their decision to remove the Institute from the State of Mysore?

Dr. R. NAGAN GOWDA.—Now it is difficult to say that, because, when the biggest officer from there came with me and showed me an alternative site, we said that we could easily acquire it and also get the villagers agree; it was very easy for them to acquire and they did not do it. As I said before, we went out of the way to give them as many facilities as possible to acquire the land.

Sri J. MOHAMED IMAM.—If it is only a question of finance, will the Government acquire the required extent of land at its cost and give it over to the Institute?

Dr. R. NAGAN GOWDA.—That question has already been answered by the Chief Minister.

ಶ್ರೀ ವಿ. ವೆಂಕಟಪ್ಪ.—ಕಾರ್ಪೊರೇಷನ್ನಿಗೂ ಮತ್ತು ಫಲಪುಷ್ಪ ವ್ಯವಸಾಯದ ಇಲಾಖೆಗೂ ಸೇರಿರತಕ್ಕ 200 ಎಕರೆ ಜಮೀನನ್ನು ಇನ್‌ಸ್ಟಿಟ್ಯೂಟಿನ ತಕ್ಷಣದ ಉಪಯೋಗಕ್ಕಾಗಿ, ಉಚಿತವಾಗಿ ಮಂಜೂರ್ ಮಾಡ ಬೇಕೆಂದು ಭಾರತ ಸರ್ಕಾರದವರು ಅಭಿಪ್ರಾಯ ಪಡುತ್ತಾರೆಂದು ಹೇಳಿದ್ದೀರಿ. ಹೀಗೆ ಸರ್ಕಾರದವರು ಆ ಜಮೀನನ್ನು ಬಿಟ್ಟುಕೊಡುವುದಕ್ಕೇನು ಕಷ್ಟವಿದೆ?

ಶ್ರೀ ಕೆ. ಹನುಮಂತಯ್ಯ.—ಈಗ ಆ ''ಉಚಿತವಾಗಿ'' ಎನ್ನುವ ಪ್ರಶ್ನೆ ಏಳುವುದಿಲ್ಲ. ಮೊದಲು ಇದನ್ನು ಅವರು ಅಕ್ಯಯಿರ್ ಮಾಡಿಕೊಳ್ಳುವಾಗ ದುಡ್ಡು ಕೊಟ್ಟು ಅಕ್ಯಯಿರ್ ಮಾಡಿಕೊಂಡಿದ್ದಾರೆ. Dairy Institute is a Central responsibility. We have also to think over whether it is not the Central Government s responsibility financially.

ಶ್ರೀ ವಿ. ವೆಂಕಟಪ್ಪ.—ತಾವು ಈಗ ಸ್ವಲ್ಪ ಹೊತ್ತಿಗೆ ಮುಂಚೆ ಉತ್ತರ ಕೊಡುವಾಗ ಇಲ್ಲ ಸರ್ಕಾರಿ ಜಮೀನಿದ್ದಿದ್ದರೆ ನಾವೂ ಸಹ ಹಾಗೆ ಕೊಡುತ್ತಿದ್ದೆವೆಂದು ಹೇಳಿದಿರಿ. ಆದರೆ ಈಗ ಪುನಃ ಹಾಗೆ ಉಚಿತವಾಗಿ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದೀರಿ—ಇದು ಹೇಗೆ?

Sri K. HANUMANTHAIYA.—We have no objection to give land; but the market value must be paid. That is the question under consideration.

ಶ್ರೀ ವಿ. ವೆಂಕಟಪ್ಪ.—ಈ ಇನ್‌ಸ್ಟಿಟ್ಯೂಷನ್‌ಬಳಿ ಇರುವ 163 ಎಕರೆ ಜಮೀನಿಗೆ ವರ್ಷ ಒಂದಕ್ಕೆ 26 ಸಾವಿರ ಚಿಲ್ಲರೆ ರೂಪಾಯಿಗಳಷ್ಟು ಗೇಣಿ ಕೊಡಬೇಕಾಗಿರುತ್ತದೆಯೆಂದು ಹೇಳಿದ್ದೀರಿ. ಒಂದು ವರ್ಷಕ್ಕೆ ಇಷ್ಟು ಗೇಣಿ ಆಗುತ್ತದೆಯೇ? ಹೀಗೆ ಹೇಳಿರತಕ್ಕದ್ದು ನರಿಯಾಗಿದೆಯೇನು?

Dr. R. NAGAN GOWDA.—That is what they are getting now.

Sri V. VENKATAPPA.—From what?

Dr. R. NAGAN GOWDA.—The Corporation is getting that lease amount on this land. Here grass is being grown and sold in the City.

Filature Silk.

Q.—75. **Sri S. SRINIVASA IYENGAR** (T.-Narsipur).—

Will the Government be pleased to state:—

(*a*) the production of Filature Silk each year in:—

(i) the Mysore Government Silk Filatures, Kankanhally;

(ii) the Silk Filatures, Ltd., and its Branches, T.-Narasipur;

(iii) the Mysore Spun Silk Mills, Ltd., Channapatna;

during the period 1st January 1943 to 1st April 1954;

(*b*) the net profit or loss of these concerns each year as indicated in the profit and loss account of the concerns during the above period;

(*c*) the action taken by the State Government to stem the loss and stabilise the industry;

(*d*) the action taken by Government to treat this industry as an Essential Service?